ಪೊಲೀಸ್ ಇನ್ಸ್‌ಪೆಕ್ಟರ್
ಮಹಿಳಾ ಪೊಲೀಸ್ ಠಾಣೆ
ಶಿವಮೊಗ್ಗ ದಿ:-07.07.2022

ಗೆ,
ಮಾನ್ಯ ಆಯುಕ್ತರು
ಉನ್ನತ ಶಿಕ್ಷಣ ಸೌಧ
ಕಾಲೇಜು ಶಿಕ್ಷಣ ಇಲಾಖೆ
ಶೇಷಾದ್ರಿ ರಸ್ತೆ
ಬೆಂಗಳೂರು. 560001

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ.......
08/07/2022
ದಿನಾಂಕ.......

ವಿಷಯ:- ಅಪಹರಣವಾಗಿರುವ ಬಾಲಕಿ ವರ್ಷಿತ ಮತ್ತು ಸಂಶಯಾಸ್ಪದ ವ್ಯಕ್ತಿ ಲಿಂಗರಾಜು @ ವಿರಾಟ್ @ ರಾಜು ಇವರುಗಳ ಬಗ್ಗೆ ತಮ್ಮ ಅಧೀನದಲ್ಲಿ ಬರುವ ಕಾಲೇಜು ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳ ವಾಟ್ಸಾಫ್ ಗ್ರೂಫ್ ನಲ್ಲಿ ಆರೋಪಿತನ ಪೊಲೀಸ್ ಪ್ರಕಟಣೆ ಪತ್ರವನ್ನು ಹಾಕಿಸಿ ಪ್ರಚಾರ ಪಡಿಸಲು ಕೋರಿ.

ಉಲ್ಲೇಖ: ಜಯನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ-102/21 ಕಲಂ-363,366,109,212,ಐಪಿಸಿ ಮತ್ತು 12 ಮತ್ತು 17 ಪೋಕ್ಸೋ ಆಕ್ಟ್, ಹಾಗೂ 11 ಬಾಲ್ಯ ವಿವಾಹ ನಿಷೇಧ ಕಾಯ್ದೆ.

**********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಜಿಲ್ಲೆಯ ಜಯನಗರ ಪೊಲೀಸ್ ಠಾಣೆಯಲ್ಲಿ ಅಪ್ರಾಪ್ತ ಬಾಲಕಿಯಾದ ವರ್ಷಿತ 16 ವರ್ಷ, ಈಕೆಯು ಅಪಹರಣಗೊಂಡಿದ್ದು, ಪಿರ್ಯಾದಿದಾರರು ಪಿರ್ಯಾದು ನೀಡುವಾಗ ಪಿರ್ಯಾದುವಿನಲ್ಲಿ ಲಿಂಗರಾಜು @ ವಿರಾಟ್ @ ರಾಜು 26 ವರ್ಷ, ಈತನ ಮೇಲೆ ಅನುಮಾನ ವ್ಯಕ್ತ ಪಡಿಸಿದ್ದು, ಈತನು ಬೆಂಗಳೂರಿನ ಕೆ ಪಿ ಅಗ್ರಹಾರದಲ್ಲಿ ವಾಸವಾಗಿರುತ್ತಾನೆ. ಪಿರ್ಯಾದಿ ಶ್ರೀ. ವಿನಯ್ ಕುಮಾರ್ ರವರು ತನ್ನ ಮಗಳು ದಿ:27-12-2021 ರಂದು ಸದರಿ ಲಿಂಗರಾಜು @ ವಿರಾಟ್ @ ರಾಜು ಈತನೇ ತನ್ನ ಮಗಳನ್ನು ಅಪಹರಿಸಿಕೊಂಡು ಹೋಗಿರುತ್ತಾನೆ ಎಂದು ದೂರನ್ನು ಸಲ್ಲಿಸಿದ ಮೇರೆಗೆ ಉಲ್ಲೇಖದ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಈವರೆವಿಗೂ ಕೈಗೊಂಡಿರುವ ತನಿಖೆಯಿಂದ ಅಪಹರಣಕ್ಕೊಳಗಾದ ಬಾಲಕಿ ಮತ್ತು ಅನುಮಾನಸ್ಪದ ವ್ಯಕ್ತಿಯ ಇರುವಿಕೆಯ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಸದರಿ ಪ್ರಕರಣವು ಅತೀಗಂಭೀರ ಪ್ರಕರಣವಾಗಿರುತ್ತದೆ.ಆದ್ದರಿಂದ ಅಪಹರಣಕ್ಕೊಳಗಾದ ಬಾಲಕಿ ಮತ್ತು ಅನುಮಾನಸ್ಪದ ವ್ಯಕ್ತಿಯ ಇವರುಗಳ ಬಗ್ಗೆ ತಮ್ಮ ಅಧೀನದಲ್ಲಿ ಬರುವ ಕಾಲೇಜುಗಳ ಉಪನ್ಯಾಸಕರ ಹಾಗೂ ವಿದ್ಯಾರ್ಥಿಗಳ ವಾಟ್ಸಾಫ್ ಗ್ರೂಫ್ ನಲ್ಲಿ ಆರೋಪಿತನ ಪೊಲೀಸ್ ಪ್ರಕಟಣೆ ಪತ್ರವನ್ನು ಹಾಕಿಸಿ ಪ್ರಚಾರ ಪಡಿಸಲು ಕೋರುತ್ತೇನೆ.

ಇದರೊಂದಿಗೆ ಪೊಲೀಸ್ ಪ್ರಕಟಣೆ ಪತ್ರವನ್ನು ಲಗತ್ತಿಸಿದೆ.

ತಮ್ಮ ವಿಶ್ವಾಸಿ.
Police Inspector
(ಪಿರ್ಯಾದಿ)
Women Police Station
ಮಹಿಳಾ ಪೊಲೀಸ್ ಠಾಣೆ. ಶಿವಮೊಗ್ಗ

# ಪೋಲೀಸ್ ಪ್ರಕಟಣೆ

## ಈತನ ಬಗ್ಗೆ ಮಾಹಿತಿ ತಿಳಿಸಿದವರಿಗೆ 50 ಸಾವಿರ ರೂ. ಬಹುಮಾನ




ಈ ಭಾವಚಿತ್ರದಲ್ಲಿರುವ **ಅಂಗರಾಜ್ ಅಲಿಯಾಸ್ ವಿರಾಟ್** ಎಂಬ 26 ವರ್ಷ ವಯಸ್ಸಿನ ಯುವಕ ದಿನಾಂಕ 27-12-2021 ರಂದು ಅಪ್ರಾಪ್ತ ಬಾಲಕಿಯನ್ನು ಅಪಹರಿಸಿಕೊಂಡು ಇದುವರೆಗೂ ನಾಪತ್ತೆಯಾಗಿದ್ದಾನೆ.

(**ಅಪಹರಣಕ್ಕೊಳಗಾದ ಬಾಲಕಿಯ ಚಹರೆ ಗುರುತುಗಳು** : ವಯಸ್ಸು 16 ವರ್ಷ, ಎತ್ತರ-135 ಸೆಂ. ಮೀ., ಸಾಮಾನ್ಯ ಕಪ್ಪು ಬಣ್ಣದಕೂದಲು, ಗೋಧಿ ಮೈಬಣ್ಣ, ದುಂಡು ಮುಖ, ಸಾಧಾರಣ ಮೈಕಟ್ಟು ಹೊಂದಿರುತ್ತಾಳೆ.)

**ಸಂಶಯಾಸ್ಪದ ವ್ಯಕ್ತಿಯ ಚಹರೆ ಗುರುತುಗಳು** : 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ಕಪ್ಪು ಕಣ್ಣುಗಳು, ಚಿಗುರುಗಡ್ಡ, ಚಿಗುರು ಮೀಸೆ ಬಿಟ್ಟಿದ್ದು, ಕನ್ನಡ, ತೆಲುಗು ಮಾತನಾಡುತ್ತಿದ್ದು, ಎಡಗೈ ಹಾಗೂ ಬಲಗೈ ಮೊಣಕೈ ಮೇಲೆ ಹಳೆಯ ಗಾಯದ ಕಲೆಗಳು ಇರುತ್ತವೆ. ಹೆಚ್ಚಾಗಿ ರೆಡಿಮೇಡ್ ಬಟ್ಟೆಗಳನ್ನು ಹಾಗೂ ನೈಟ್ ಪ್ಯಾಂಟ್ ಮತ್ತು ಟೀ ಶರ್ಟ್‌ಗಳನ್ನು ಧರಿಸುವ ಹವ್ಯಾಸ ಇರುತ್ತದೆ. ಈತನು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರ, ಆಟೋ ಚಾಲಕ, ಹಳೇ ವಾಹನಗಳ ವ್ಯಾಪಾರ, ಮನೆ, ಮನೆಗೆ ಗ್ಯಾಸ್ ಹಾಕುವ ಕೆಲಸ ಮಾಡುತ್ತಾನೆ ಎಂದು ತಿಳಿಸು ಬಂದಿದೆ ಇವರಿಬ್ಬರ ಬಗ್ಗೆ ಯಾರಿಗಾರೂ ಸುಳಿವು ಸಿಕ್ಕಲ್ಲಿ **ಪೋಲೀಸ್ ನಿರೀಕ್ಷಕರು ಮಹಿಳಾ ಪೋಲೀಸ್ ಠಾಣೆ ಶಿವಮೊಗ್ಗ, ಫೋನ್ ನಂ. 9480803349, 9449584739ಗೆ ಹಾಗೂ ಶಿವಮೊಗ್ಗ ಪೋಲೀಸ್ ನಿಯಂತ್ರಣ ಕೊಠಡಿ ಫೋನ್ ನಂ. 9480803300ಗೆ ತಿಳಿಸಲು ಕೋರಲಾಗಿದೆ.**

ದಯಮಾಡಿ ಕೀಳಬೇಡಿ. ವಾಟ್ಸಪ್ ಮುಖಾಂತರ ಶೇರ್ ಮಾಡಿ. ಪತ್ತೆಹಚ್ಚಲು ಸಹಕರಿಸಿ

**Jayanagar ps cr no 102/21 us 363, 366,109,212 IPC 12&17 POSCO act 11 prohibition of child marriage act.**

**Those who provide relavant information will be rewarded 50.000/-**